**(ಇಂದು ದಿಃ 27.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

**ಮಧ್ಯಂತರ ಅರ್ಜಿ ನಂ.1ರ ಮೇಲೆ ಸಾಕ್ಷ್ಯ.**

<u>ಮುಖ್ಯ ವಿಚಾರಣೆ ಃ- ಶ್ರೀಮತಿ ಎ.ಪಿ.ಡಿ. ವಕೀಲರಿಂದ ಮೇಲ್ಮನವಿದಾರ ಪರ ಃ-</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ಆದ್ದರಿಂದ ಮಧ್ಯಂತರ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ನೀಡಲು ವಿನಂತಿ.

<u>ಪಾಟೀ ಸವಾಲು ಃ- ಶ್ರೀ ವಿ.ವಿ.ಎ. ವಕೀಲರಿಂದ ಎದುರುದಾರರ ಪರ ಃ-</u>

ನಾವು ಒಎಸ್.ನಂ.133/2016 ನಲ್ಲಿ ವಕೀಲರನ್ನು ನೇಮಿಸಿರಲಿಲ್ಲ. 2016ನೇ ಸಾಲಿನಲ್ಲಿ ಕಾರ್ಯನಿರ್ವಹಕ ಅಧಿಕಾರಿಯಾಗಿ ನಾಗಮೂರ್ತಿ ಎಂಬುವವರು ಪ್ರಭಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಒಎಸ್.ನಂ.133/2016ರಲ್ಲಿ 1 ಮತ್ತು 2ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಎಸ್. ಚಿಂಚೋರೆ, ವಕೀಲರು ಹಾಜರಾಗಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ನಾನು 1ನೇ ಮೇಲ್ಮನವಿದಾರರ ಸಂಸ್ಥೆಯಲ್ಲಿ ದಿಃ 22.07.2023ರಲ್ಲಿ ಅಧಿಕಾರಿ ವಹಿಸಿಕೊಂಡಿರುತ್ತೇನೆ. ನಮ್ಮ ಸಂಸ್ಥೆಯಲ್ಲಿ ಕೋರ್ಟ್ ಪ್ರಕರಣಗಳನ್ನು ನಿಭಾಯಿಸಲು ಸಿಬ್ಬಂದಿಗಳನ್ನು ನೆಮೀಸಲಾಗಿದೆ ಎಂದರೆ ಸರಿ. ನಾನು ಅಧಿಕಾರ ವಹಿಸಿಕೊಂಡ ನಂತರ ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಪಡೆದಿದ್ದೇನೆ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಒಎಸ್.ನಂ.133/2016ರಲ್ಲಿ ಆದ ಆದೇಶದ ಬಗ್ಗೆ ಸದರಿ ವಕೀಲರು ನಮ್ಮ ಕಛೇರಿಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ. 1ನೇ ಮೇಲ್ಮನವಿದಾರರ ಕಛೇರಿ ಆಳಂದ ನಗರದಲ್ಲಿ ಇದೆ ಎಂದರೆ ಸರಿ. ಸದರಿ ದಾವೆಯ ಮುದ್ದತುಗಳಿಗೆ ನಾನು ಹಾಜರಾಗುತ್ತಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪ್ರತಿವಾದಿಗೆ ಮಂಜೂರಾತಿಯ ಬಗ್ಗೆ ಮೂಲ ದಾಖಲೆಗಳು ದೊರೆಯದೇ ಇರುವುದರಿಂದ ಮೇಲ್ಮನವಿಯನ್ನು ಸಲ್ಲಿಸಲು ವಿಳಂಭವಾಗಿರುತ್ತದೆ. ನಾನು ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಲು ಆದ ವಿಳಂಭವನ್ನು ಮನ್ನಿಸಲು ಸಕಾರಣಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಆಳಂದ.